<u>ಅಸಲು ದಾವಾ ಸಂಖ್ಯೆ- **27/2018**</u> ಡಿ.ಡಬ್ಲ್ಯೂ:- **1**

ದಿನಾಂಕಃ **13-01-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ಸರ್ವೇ ನಂ.19 ರಲ್ಲಿರುವ 2 ಎಕರೆ 13 ಗುಂಟೆ ಜಮೀನನ್ನು ನಿಮ್ಮ ತಂದೆಯವರ ಹೆಸರಿಗೆ ಯಾರ ಹೆಸರಿನಿಂದ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ದೇವಿರಮ್ಮರವರಿಂದ ನಮ್ಮ ತಂದೆಯವರ ಹೆಸರಿಗೆ ಮಾಡಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ದೇವಿರಮ್ಮನ ಮಗಳ ಮಗ. ದೇವಿರಮ್ಮನ ಗಂಡನ ಹೆಸರು ಮುರಿಗೆಪ್ಪ. ಮುರಿಗೆಪ್ಪನಿಗೆ 3 ಜನ ಅಣ್ಣ ತಮ್ಮಂದಿರು. ಮುರಿಗೆಪ್ಪನ ಅಣ್ಣ ತಮ್ಮಂದಿರಿಗೆ ಮಕ್ಕಳಿದ್ದಾರೆ. ಮುರಿಗೆಪ್ಪನ ಅಣ್ಣ ತಮ್ಮಂದಿರ ಮಕ್ಕಳಿಗೆ ಸರ್ವೇ ನಂ.19 ರಲ್ಲಿರುವ 2 ಎಕರೆ 13 ಗುಂಟೆ ಜಮೀನನ್ನು ಪೌತಿ ಖಾತೆಯ ಆಧಾರದ ಮೇಲೆ ತಮ್ಮಗಳ ಹೆಸರಿಗೆ ಮಾಡಿಕೊಳ್ಳುವ ಅಧಿಕಾರ ಇದೆಯೇ ಹೊರತು ನಮ್ಮ ತಂದೆಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದೇವಿರಮ್ಮನ ವಾರಸುದಾರ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ದೇವಿರಮ್ಮ ಒಟ್ಟು ಕುಟುಂಬದ ಸದಸ್ಯರು ಅಲ್ಲ ಎಂದರೆ ಸರಿಯಲ್ಲ. ದೇವಿರಮ್ಮರವರು ಯಾವ ದಿನಾಂಕದಂದು ಮರಣ ಹೊಂದಿದ್ದಾರೆ ಎಂದು ನನಗೆ ನೆನಪಿಲ್ಲ. ದೇವಿರಮ್ಮರವರು ಕುಂದೂರಿನಲ್ಲಿ ಮರಣ ಹೊಂದಿರುತ್ತಾರೆ. ದೇವಿರಮ್ಮ ನಮ್ಮ ತಂದೆಯವರನ್ನು ದತ್ತು ತೆಗೆದುಕೊಂಡಿದ್ದರು. ದೇವಿರಮ್ಮರವರು ನಮ್ಮ ತಂದೆಯನ್ನು ದತ್ತು ತೆಗೆದುಕೊಂಡಿರುವ ವಿಚಾರವನ್ನು ಪ್ರತಿವಾದ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆಯ ಚುನಾವಣೆ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ನ ಗುರುತಿನ ಚೀಟಿಯಲ್ಲಿ ತಂದೆಯ ಹೆಸರು ಬಸಪ್ಪ ಎಂದು ನಮೂದಾಗಿದೆ ಎಂದರೆ ಸರಿ. ನಮ್ಮ

ತಂದೆಗೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳಲ್ಲಿ ಅವರ ತಂದೆಯ ಹೆಸರು ಮುರಿಗೆಪ್ಪ ಎಂದು ನಮೂದಾಗಿಲ್ಲ ಎಂದರೆ ಸರಿ. ದೇವಿರಮ್ಮರವರು ನಮ್ಮ ತಂದೆಯವರನ್ನು ದತ್ತು ತೆಗೆದುಕೊಂಡಿರುವ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಮರಣ ಶಾಸನ ಹೊರತುಪಡಿಸಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಮರಣ ಶಾಸನದ ಪತ್ರ ನಮ್ಮ ಬಳಿ ಇರುವುದಿಲ್ಲ. ದೇವಿರಮ್ಮರವರು ನಮ್ಮ ತಂದೆಯವರನ್ನು ದತ್ತು ತೆಗೆದುಕೊಂಡಿರುವ ಬಗ್ಗೆ ನಮ್ಮ ಊರಿನಲ್ಲಿ ಸಾಕ್ಷಿದಾರರು ಇರುತ್ತಾರೆ ಅವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ಯಾವುದೇ ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.